ಕನ್ನಡಪ್ರಭ

Saturday, December 24, 2011



# ಕರುನಾಡ ಕ್ರಿಕೆಟ್‌ನಲ್ಲಿ ಮತ್ತೊಬ್ಬ ರಾಹುಲ್

• ನವೀನ್ ಭಟ್.ಎಚ್. ಇಳಂತಿಲ

ಕ್ರಿಕೆಟ್‌ನಲ್ಲಿ ಪಳಗಿ ಸಾಧನೆ ಮಾಡಬೇಕೆಂಬ ಯುವಕರಿಗೆ ರಾಹುಲ್ ದ್ರಾವಿಡ್‌ಗಿಂತ ಬೇರೆ ಆದರ್ಶ, ಸ್ಫೂರ್ತಿ ಬೇಕಿಲ್ಲ. ಅಂತಹ ಭಾರತದ ಮಹಾನ್ ಗೋಡೆಯ ಬಹು ದೊಡ್ಡ ಅಭಿಮಾನಿ ತಾನು ಎನ್ನುತ್ತಲೇ ಬೆಳೆಯುತ್ತಿರುವ ಮತ್ತೊಬ್ಬ ರಾಹುಲ್ ಕರುನಾಡಿನಲ್ಲಿ ಭರವಸೆಯ ಕ್ರಿಕೆಟಿಗನಾಗಿ ಛಾಪು ಮೂಡಿಸುತ್ತಿದ್ದಾನೆ.

ಬಾಲ್ಯದಲ್ಲೇ ಕ್ರಿಕೆಟ್ ಕ್ಷೇತ್ರ ಈತನನ್ನು ಸೆಳೆಯಿತು, ಆತನ ಅತೀವ ಆಸಕ್ತಿಯನ್ನು ಮನಗಂಡ ಪೋಷಕರು ಮಂಗಳೂರಿನ ನೆಹರೂ ಮೈದಾನದಲ್ಲಿ ನಡೆಯುತ್ತಿದ್ದ ಬೇಸಿಗೆ ಸೇರಿಸಿದರು. ಕೋಚ್ ಜಯರಾಜ್ ಮತ್ತು ಮ್ಯಾನೇಜರ್ ಬಾಲಕೃಷ್ಣ ಪೈಯವರ ಮಾರ್ಗದರ್ಶನದಲ್ಲಿ ಪಳಗಿದ ಈತನಿಗೆ ಇದೇ ಟರ್ನಿಂಗ್ ಪಾಯಿಂಟ್ ಆಯಿತು.

## ಉತ್ತಮ ಫೀಲ್ಡರ್

ಸ್ಪರ್ಧಾತ್ಮಕತೆ ಹೆಚ್ಚಿರುವ ದಿನಗಳಲ್ಲಿ ಬ್ಯಾಟ್ಸ್‌ಮನ್ ಒಬ್ಬ ಫೀಲ್ಡಿಂಗ್‌ನಲ್ಲೂ ಚುರುಕುತನ ತೋರಿದಾಗ ಮಾತ್ರ ಆತ ತಂಡಕ್ಕೆ ಉಪಕಾರಿಯಾಗಬಲ್ಲ. ಈ ನಿಟ್ಟಿನಲ್ಲಿ ರಾಹುಲ್ ಯಾವತ್ತೂ ಉದಾಸೀನ ತೋರಿಲ್ಲ. ದಿನದಿಂದ ದಿನಕ್ಕೆ ತನ್ನ ಆಟವನ್ನು ಉತ್ತಮಪಡಿಸುತ್ತಾ ಸಾಗಿರುವ ಅವರು ತಾಳ್ಮೆಯ ಬಲಗೈ ಆರಂಭಿಕ ಬ್ಯಾಟ್ಸ್‌ಮನ್ ಮಾತ್ರವಲ್ಲ, ಉತ್ತಮ ಕ್ಷೇತ್ರರಕ್ಷಕರೂ ಹೌದು. ಅಗತ್ಯ ಸಂದರ್ಭದಲ್ಲಿ ಗ್ಲೌಸ್ ತೊಟ್ಟು ಕೀಪಿಂಗ್ ಮಾಡಬೇಕಾದರೆ ಅದಕ್ಕೂ ಈತ ರೆಡಿ.

ತರಬೇತಿ ಪಡೆದ ಆರೇ ತಿಂಗಳಲ್ಲಿ ಜಿಲ್ಲಾಮಟ್ಟದ ಅಂಡರ್ 13 ತಂಡದಲ್ಲಿ ಗುರುತಿಸಿಕೊಂಡ ರಾಹುಲ್ ಮಂಗಳೂರು ವಲಯದ ಮೂರು ಪಂದ್ಯದ 4 ಇನ್ನಿಂಗ್ಸ್‌ನಲ್ಲಿ ಎರಡು ದ್ವಿಶತಕ ಸಹಿತ 650 ರನ್ ಕಲೆ ಹಾಕಿ ಉತ್ತಮ ಬ್ಯಾಟ್ಸ್‌ಮನ್ ಪ್ರಶಸ್ತಿ ತನ್ನದಾಗಿಸಿಕೊಂಡ.

ಈತ ರಾಜ್ಯಮಟ್ಟದಲ್ಲಿ ತೋರಿದ ಪ್ರತಿಭೆಯನ್ನು ಗುರುತಿಸಿದ ಆಯ್ಕೆ ಮಂಡಳಿ, ದಕ್ಷಿಣವಲಯ ಅಂಡರ್ 13 ಟೂರ್ನಿಯಲ್ಲಿ ಕರ್ನಾಟಕದ ಪರವಾಗಿ ಆಡುವ ಅವಕಾಶ ನೀಡಿತು. ಸಿಕ್ಕ ಅವಕಾಶವನ್ನು ಬಾಚಿ ಆಡಿದ 5 ಪಂದ್ಯದಲ್ಲಿ ಮೂರು ಶತಕದೊಡನೆ 450 ರನ್ ಸಂಪಾದಿಸಿದ ರಾಹುಲ್ ಸರಣಿಶ್ರೇಷ್ಠ ಪ್ರಶಸ್ತಿಗೆ ಭಾಜನನಾದ.

2006 ರಲ್ಲಿ ಅಂಡರ್-15 ನ ಕರ್ನಾಟಕ ತಂಡದ ನಾಯಕತ್ವದ ಜವಾಬ್ದಾರಿಯನ್ನು ಹೊತ್ತ ರಾಹುಲ್, ಗೋವಾ ಮತ್ತು ಹರಿಯಾಣದ ವಿರುದ್ಧದ ಏಳು ಪಂದ್ಯದಲ್ಲಿ 62ರ ಸರಾಸರಿಯಲ್ಲಿ ಮೂರು ಶತಕದೊಡನೆ 555 ರನ್ ಹೊಡೆದು ತನ್ನ ನಾಯಕತ್ವವನ್ನು ಸಮರ್ಥಿಸಿಕೊಂಡನು. ಇದಲ್ಲದೆ ಅಂಡರ್ 17 ನಾಯಕತ್ವದ ಪಟ್ಟವೂ ಈತನಿಗೇ ಒಲಿಯಿತು.

ಮುಂದೆ ನಡೆದ ಇ.ಎಲ್. ಎಫ್ ವೆಂಗ್‌ಸರ್ಕರ್ ಅಕಾಡೆಮಿ ಟೂರ್ನಮೆಂಟ್, ಆಲ್ ಇಂಡಿಯಾ ಟೂರ್ನಮೆಂಟ್ ಸೇರಿದಂತೆ ಹಲವಾರು ಪಂದ್ಯದಲ್ಲಿ ಈತನಿಂದ ಉತ್ತಮ ಪ್ರದರ್ಶನ ಮೂಡಿಬಂತು.

ಎಲ್ಲಾ ವಯೋಮಿತಿಯ ಕ್ರಿಕೆಟ್ ಪಂದ್ಯದಲ್ಲಿ ಎಲ್ಲರೂ ಮೆಚ್ಚುವಂತಹ ಪ್ರದರ್ಶನ ನೀಡಿದ ರಾಹುಲ್‌ನನ್ನು ಭಾರತ ಕ್ರಿಕೆಟ್ ಆಯ್ಕೆ ಮಂಡಳಿ ಅಂಡರ್ 19 ಭಾರತ- ಶ್ರೀಲಂಕಾ-ದ.ಆಫ್ರಿಕಾ ತ್ರಿಕೋನ ಸರಣಿಗೆ ಆಯ್ಕೆ ಮಾಡಿತು. ಇಲ್ಲಿ ನೀಡಿದ ಉತ್ತಮ ಪ್ರದರ್ಶನದಿಂದಾಗಿ 2011 ರಲ್ಲಿ ನ್ಯೂಜಿಲೆಂಡ್‌ನಲ್ಲಿ ನಡೆದ ಅಂಡರ್-19 ವಿಶ್ವಕಪ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸುವ ಅವಕಾಶ ದೊರಕಿತು.

2010 ರ ಕರ್ನಾಟಕ ರಣಜಿ ತಂಡಕ್ಕೆ ಆಯ್ಕೆಯಾದ ಈತ ಪ್ರಥಮ ಪಂದ್ಯದಲ್ಲೇ ಪಂಜಾಬ್ ವಿರುದ್ಧ 64 ರನ್ ಸಿಡಿಸಿ ತನ್ನ ಬ್ಯಾಟಿಂಗ್ ಕ್ಷಮತೆಯನ್ನು ತೋರಿಸಿದ. ಮುಂದೆ ಒರಿಸ್ಸಾ, ಹಿಮಾಚಲ ಪ್ರದೇಶದ ವಿರುದ್ಧದ ಪಂದ್ಯಗಳಲ್ಲೂ ಉತ್ತಮ ಪ್ರದರ್ಶನ ನೀಡಿದ.

2009-10 ರಲ್ಲಿನ ಕರ್ನಾಟಕ ಪ್ರೀಮಿಯರ್ ಲೀಗ್‌ನಲ್ಲಿ ಬೆಂಗಳೂರು ಬ್ರಿಗೇಡಿಯರ್ಸ್ ತಂಡದಲ್ಲಿ ಆರಂಭಿಕನಾಗಿ ಕಣಕ್ಕಿಳಿದು ಉತ್ತಮ ಆಟಗಾರ ಎಂದು ಈಗಾಗಲೇ ಸಾಬೀತುಪಡಿಸಿದ್ದಾನೆ. 2010 ರ ಸಿ.ಕೆ. ನಾಯ್ಡು ಟ್ರೋಫಿಯಲ್ಲಿನ ಐದು ಪಂದ್ಯದಲ್ಲಿ 703 ರನ್ ಸಂಪಾದಿಸಿದ್ದು ಆತನ ರನ್ ಹಸಿವಿಗೆ ಸಾಕ್ಷಿ. ವಿಜಯ್ ಹಜಾರೆ ಟ್ರೋಫಿ, ಎಮ್.ಆರ್.ಎಫ್ ಆಹ್ವಾನಿತ ಟೂರ್ನಿ, ಮೊಹಿದುಲ್ಲಾ ಟ್ರೋಫಿ, ಸಫೀದನ್ ಶಹಾ ಟೂರ್ನಮೆಂಟ್ ಮುಂತಾದ ಪ್ರಮುಖ ಪಂದ್ಯಾವಳಿಗಳಲ್ಲಿ ರಾಹುಲ್‌ನ ಪ್ರದರ್ಶನವನ್ನು ಗಮನಿಸಿ ಅನೇಕ ಕ್ರಿಕೆಟಿಗರು ಪ್ರಶಂಸಿಸಿದ್ದಾರೆ.

## ಸಾಗಬೇಕಿದೆ ಬಹುದೂರ

'ಕ್ರಿಕೆಟ್ ಕ್ಷೇತ್ರದಲ್ಲಿ ನಾನು ಇನ್ನೂ ಪಳಗಬೇಕು. ಕರ್ನಾಟಕದ ರಣಜಿ ತಂಡದ ಖಾಯಂ ಆಟಗಾರನಾಗಿ ಗುರುತಿಸಿ, ಭಾರತ ತಂಡವನ್ನು ಪ್ರತಿನಿಧಿಸಬೇಕೆಂಬ ಹಂಬಲ ನನ್ನದು' ಎಂಬುವುದು ರಾಹುಲ್‌ನ ಬಿಚ್ಚುನುಡಿ.

ಸದ್ಯ ಎನ್.ಸಿ.ಎ ಮತ್ತು ಬಿ.ಯು.ಸಿ.ಸಿ ಕ್ರಿಕೆಟ್ ಕ್ಲಬ್‌ನಲ್ಲಿ ತರಬೇತಿ ಪಡೆಯುತ್ತಿರುವ ರಾಹುಲ್‌ಗೆ ವಾಲಿಬಾಲ್, ಫುಟ್ಬಾಲ್‌ಗಳಲ್ಲಿ ಅತೀವ ಆಸಕ್ತಿ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಕೆ.ಎನ್. ಲೋಕೇಶ್ ಮತ್ತು ರಾಜೇಶ್ವರಿ ದಂಪತಿಯ ಪುತ್ರನಾದ ರಾಹುಲ್ ಬೆಂಗಳೂರಿನ ಜೈನ್ ವಿ.ವಿ.ಯಲ್ಲಿ ದ್ವಿತೀಯ ಬಿ.ಕಾಂ ವಿದ್ಯಾರ್ಥಿ.

ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರಿಕೆಟ್‌ನಲ್ಲಿ ತನ್ನ ಸಾಮರ್ಥ್ಯ ಸಾಬೀತುಪಡಿಸಿರುವ ಈ ಯುವ ಕ್ರಿಕೆಟಿಗ ಭಾರತದ ಭವಿಷ್ಯದ ಗೋಡೆಯಾಗಲಿ ಎಂದು ಹಾರೈಸೋಣ. ■